ಉತ್ತರ ಕನ್ನಡ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳು.

555: (3928)

ಡಾ॥ ಎಂ.ಪಿ.ಕರ್ಕಿ (ಕುಮಟ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳನ್ನು ಗುರುತಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಈ ಕಾಮಗಾರಿಯನ್ನು ಯಾವಾಗ ಪೂರೈಸಲಾಗುವುದು?

ಶ್ರೀಮತಿ. ಲೀಲದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) I. ಈ ಕೆಳಕಂಡ ಪ್ರವಾಸಿ ಸ್ಥಳಗಳನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸಿ ತಾಣಗಳನ್ನಾಗಿ ಗುರುತಿಸಲಾಗಿದೆ.

1. ಕಾರವಾರ, (2) ಕೂರ್ಮಗಢ; (3) ದೇವಗಢ; 4. ದೇವಬಾಗ್; (5) ಉಳವಿ; (6) ರಾಮನಗರ; 7. ಕ್ಯಾಸೆಲ್‌ರಾಕ್; (8) ಎಲ್ಲಾಪುರ; 9. ಮಾಗೋಡು ಫಾಲ್ಸ್; (10) ಲಾಲ್‌ಗುಡಿ ಫಾಲ್ಸ್; 11. ಹಳಿಯಾಳ; (12) ದಾಂಡೇಲಿ; (13) ಸಿದ್ದಾಪುರ; 14. ಉಂಚಲಿ ಫಾಲ್ಸ್; (15) ಸಿರ್ಸಿ; (16) ಸೋಂಡಾ; 17. ಬನವಾಸಿ; (18) ಗೋಕರ್ಣ; (19) ಯಾಣ; 20. ಧಾರೇಶ್ವರ; (21) ಕೊಟ್ಲೆ; (22) ಓಂ ಕಡಲುಗಳು 23.ಅಂಕೋಲಾ; (24) ಭಟ್ಕಲ್; (25) ಮುರುಡೇಶ್ವರ; 26. ಬಸವರಾಜದುರ್ಗಾ; (27) ಇಡಗುಂಜಿ.

II. 1) ರಾಜ್ಯ ಯೋಜನೆಯಡಿಯಲ್ಲಿ ಪ್ರಸ್ತುತ 1998-99ರಲ್ಲಿ ''ಓಂ ಕಡಲ ತೀರ''ದಲ್ಲಿ ಸುಮಾರು 5.00 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಪ್ರಸಾದನ ಹಾಗೂ ಸ್ನಾನದ ಮನೆಯನ್ನು ನಿರ್ಮಿಸಲಾಗುತ್ತಿದೆ.

2) ಕೇಂದ್ರ ಸರ್ಕಾರದ ನೆರವಿನಿಂದ ಸುಮಾರು ರೂ.78.10 ಲಕ್ಷಗಳ ಅಂದಾಜಿನಲ್ಲಿ ಕಾರವಾರದಲ್ಲಿ ಪ್ರವಾಸಿ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ.

3) ಕೇಂದ್ರ ಸರ್ಕಾರದ ನೆರವಿನಿಂದ ರೂ.25.00 ಲಕ್ಷ ಅಂದಾಜಿನಲ್ಲಿ ಕಾರವಾರದ ಬಳಿ ದೇವಬಾಗ್‌ನಲ್ಲಿ ಕಾಟೇಜ್‌ಗಳನ್ನು ನಿರ್ಮಿಸಲಾಗುತ್ತಿದೆ.

ಆ) 1) ಓಂ ಕಡಲು ತೀರದಲ್ಲಿ ನಿರ್ಮಿಸಲಾಗುವ ಯೋಜನಾ ಕಾಮಗಾರಿ ಮೆ:

ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗೆ ವಹಿಸಲಾಗಿದೆ. ಕಾಮಗಾರಿ ಶೀಘ್ರದಲ್ಲಿ ಪ್ರಾರಂಭಿಸಲಾಗುವುದು.

2) ಕಾರವಾರ ಪ್ರವಾಸಿ ಸಂಕೀರ್ಣದ ಕಾಮಗಾರಿ ಕರ್ನಾಟಕ ಭೂ ಸೇನಾ ನಿಗಮ ಸಂಸ್ಥೆಗೆ ವಹಿಸಲಾಗಿದ್ದು, ಕೆಲಸ ಪ್ರಗತಿಯಲ್ಲಿದೆ. ಇದುವರೆಗೆ ರೂ. 13.00 ಲಕ್ಷ ವೆಚ್ಚವಾಗಿರುತ್ತದೆ. ಜೂನ್ 99ರಲ್ಲಿ ಪೂರ್ಣ ಗೊಳಿಸಲಾಗುವುದು.

3) ದೇವಬಾಗ್‌ನಲ್ಲಿ ಕಾಟೇಜ್‌ಗಳನ್ನು ನಿರ್ಮಿಸಲಾಗುವ ಕಾರ್ಯ ಮೆ: ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆಗೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಜನವರಿ 99ರಲ್ಲಿ ಪೂರ್ಣಗೊಳಿಸಲಾಗುವುದು.

ಮಡಿಕೇರಿ ತಾಲ್ಲೂಕಿನಲ್ಲಿ ಅಕ್ರಮವಾಗಿ ಅರಣ್ಯ ಮರಗಳನ್ನು ಕಡಿಯುವಿಕೆ.

556: (3894)

ಶ್ರೀ ಡಿ.ಎಸ್.ಮಾದಪ್ಪ (ಮಡಕೇರಿ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಕೇರಿ ತಾಲ್ಲೂಕಿನ ಕೋಪಟ್ಟಿಯ ಸರ್ಕಾರಿ ಅರಣ್ಯದಲ್ಲಿ ಅಕ್ರಮವಾಗಿ ಒಟ್ಟು ಎಷ್ಟು ಮೌಲ್ಯದ ಮರಗಳನ್ನು ಕಡಿಯಲಾಗಿದೆ?

ಆ) ಅಕ್ರಮ ಮರ ಕಡಿತಲೆಯ ಈ ಪ್ರಕರಣದ ತನಿಖೆ ಈಗ ಯಾವ ಹಂತದಲ್ಲಿದೆ?

ಇ) ಅಪರಾಧಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ. ಇವರಿಂದ ವಸೂಲು ಮಾಡಿದ ಮರದ ಮೌಲ್ಯ ಮತ್ತು ದಂಡದ ಮೊತ್ತವೆಷ್ಟು?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಆಗಿನ ಮಾರ್ಕೆಟ್ ದರ ಲೆಕ್ಕಚಾರದಂತೆ 1,77,63,172.00 ರೂಪಾಯಿ ಮೌಲ್ಯದ ಮರಗಳನ್ನು ಕಡಿಯಲಾಗಿದೆ.

ಆ) ಅಕ್ರಮ ಮರಗಳ ಕಡಿತಲೆಯ ಈ ಪ್ರಕರಣ ಪ್ರಸಕ್ತ ಸರ್ಕಾರಿ ಆದೇಶ ಸಂಖ್ಯೆ ಓಇ 130 ಸಿಓಡಿ 98 ಬೆಂಗಳೂರು ದಿನಾಂಕ 13-8-98 ಆದೇಶದನ್ವಯ ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಸಿಓಡಿ ಮತ್ತು ತರಬೇತಿ, ಬೆಂಗಳೂರು ಇವರ ನೇತೃತ್ವದಲ್ಲಿ ತನಿಖಾ ಹಂತದಲ್ಲಿ ಇದೆ.